


### ಉಪಯುಕ್ತ ಮಾಹಿತಿ

ನ.8ರ 'ಸುಧಾ' ಸಂಚಿಕೆಯ ಮುಖಪುಟ ಲೇಖನಗಳಲ್ಲಿ ಸುಧಾ ಹೆಗಡೆ, ಮುರಲೀಧರ ಕುಲಕರ್ಣಿಯವರು 'ಜೆನೆರಿಕ್' ಔಷಧಿ ಬಡವರಿಗೆ ವರದಾನ ಆಗಲಿರುವ ಕುರಿತು ಒಳ್ಳೆಯ ಮಾಹಿತಿ ನೀಡಿದ್ದಾರೆ.

– ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ವೈ.ಯಂ.ಚಂದ್ರಶೇಖರ್, ಕೂಡಿಗೆ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಎ.ಎಂ.ಬಿರಾದಾರ, ಬಾಗಲಕೋಟೆ

### ಸರ್ಕಾರ ಚಿಂತಿಸಲಿ

ವೈದ್ಯರು ಕಡಿಮೆ ಬೆಲೆಯ ಔಷಧಿ ಬರೆದು ಕೊಟ್ಟರೆ ಅದು ಸರಿಯಾಗಿ ಕೆಲಸ ಮಾಡುತ್ತೋ ಇಲ್ಲವೋ ಎಂದು ಅನುಮಾನ ಪಡುವವರು ಬಹಳ ಇದ್ದಾರೆ. ಈ ಬಗ್ಗೆ ಸರ್ಕಾರ ಏನಾದರೂ ಮಾಡಬೇಕು.

–ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ

### ಮೇಲ್ನೋಟಕ್ಕೆ ವರ!

ಅಂಗಡಿಗೆ ಹೋಗಿ ಶೇವಿಂಗ್ ಕ್ರೀಮನ್ನೋ, ಟೂತ್ ಪೇಸ್ಟನ್ನೋ ಕೊಳ್ಳುವಾಗ; ಒಡವೆಗಳನ್ನು ಕೊಳ್ಳುವಾಗ ಅಥವಾ ಬಟ್ಟೆ ಕೊಳ್ಳುವಾಗ ನಿರ್ದಿಷ್ಟ 'ಬ್ರಾಂಡ್' ನ ಮೊರೆ ಹೋಗುತ್ತೇವೆ. ಆಯುಷ್ಕರ್ಮಕ್ಕೆ ಹೋದಾಗ ಗುರುತಿನ ನಾಪಿತ ಸಿಗದಿದ್ದರೆ ಆ ಕಾರ್ಯವನ್ನು ಮುಂದಕ್ಕೆ ಹಾಕುತ್ತೇವೆ. ವೈವಿಧ್ಯತೆಯಲ್ಲಿ ಏಕತೆ ಎಂದೆಲ್ಲಾ ಭಾಷಣ ಮಾಡುತ್ತೇವೆ. ಜೆನೆರಿಕ್ ಔಷಧಿಗಳನ್ನಷ್ಟೇ ಬರೆದು ಕೊಡುತ್ತಾ ಹೋದರೆ ಈಗಾಗಲೇ ಕಂಗಾಲಾಗಿರುವ ವೈದ್ಯರು ಮತ್ತಷ್ಟು ಕಂಗಾಲಾಗುವುದರಲ್ಲಿ ಆಶ್ಚರ್ಯವಿಲ್ಲ.

ಸದ್ಯಕ್ಕಂತೂ ಜೆನೆರಿಕ್ ಔಷಧಿಗಳು ಮೇಲ್ನೋಟಕ್ಕೆ ವರವೆನಿಸಬಹುದು. ಮುಂದೆ ಏನಾಗುವುದೋ ನೋಡೋಣ!

–ಡಾ.ಕೆ.ಕೆ.ಜಯಚಂದ್ರಗುಪ್ತ, ಹಾಸನ

### ಮಾತಿನ ಮಾರ್ಗದರ್ಶನ

ವಕೀಲರು ಮತ್ತು ವಕೀಲಿಕೆ ಬಗ್ಗೆ ಪ್ರಕಟವಾದ 'ಮಾತೇ ಮುತ್ತು' ಮಾರ್ಗದರ್ಶಿ ಸೂತ್ರಗಳಂತಿದ್ದವು.

–ನಾರಾಯಣ ಯಾಜಿ, ಶಿರಾಲಿ

### ಮರೆಯದ ಆ ನೆನಪು

ಸುಚೇತನಾ ನಾಯ್ಕರ 'ಎಂದೂ ಬತ್ತದ ಕಾವಡಿ ಕೆರೆ' ಚಿತ್ರಬರಹ ಹಿಡಿಸಿತು. ಹಾಗೆಯೇ ಎಂ.ಜಿ.ಗಾಯತ್ರಿ ಶೇಷಗಿರಿಯವರ ಚಿತ್ರಲೇಖನ 'ಮತ್ತಗದಲ್ಲೊಂದು ಮಳೆಗಾಲದ ದಿನ' ಓದಿದಾಗ ನಾವು ಹಿಂದೆ ಮತ್ತಿಗ (ಮತ್ತಗ!) ಯಡೂರಿನಲ್ಲಿ ಇದ್ದ ಮತ್ತು ಶಾಲೆಗಳಲ್ಲಿ ಓದಿದ ನೆನಪಾಯ್ತು.

–ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

### ಜಲನೇತಿಯಲ್ಲ; ಸೂತ್ರನೇತಿ

'ನಿಸರ್ಗ ಚಿಕಿತ್ಸೆ; ಇದೇನು..?' ಎನ್ನುವ ನನ್ನ ಲೇಖನದಲ್ಲಿ ಜಲನೇತಿ ಎಂದು ಹಾಕಿರುವ ಚಿತ್ರ ಸೂತ್ರನೇತಿಯದ್ದು, ಜಲನೇತಿಯಲ್ಲ. ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ಎರಡು ಚಿಕಿತ್ಸಾ ಘಟಕಗಳು ರಾಜ್ಯದಲ್ಲಿ ನಡೆಯುತ್ತವೆ. ಒಂದು ಉಜಿರೆಯಲ್ಲಿರುವ 'ಶಾಂತಿವನ'; ಇನ್ನೊಂದು ಉಡುಪಿಯಲ್ಲಿರುವ 'ಸೌಖ್ಯವನ'. ಇದು ಮಣಿಪಾಲದ ಹತ್ತಿರವಿದೆ.

–ವೈ.ಎಸ್. ನಾಗರಾಜ್, ಬೆಂಗಳೂರು

### ಮಾರ್ಮಿಕ ಕಥೆ

ಬುಳಸಾಗರ ಪಾಂಡುರಂಗಯ್ಯ ಅವರ 'ನಬ್ರೂಯಾತ್ ಸತ್ಯಮಪ್ರಿಯಂ' ಕಥೆ ಬಹಳ ಇಷ್ಟವಾಯಿತು. ಶೀಲ, ನಿಷ್ಠೆಯ ಕುರಿತ ಮಾರ್ಮಿಕವಾದ ಸಂದೇಶ ಇತ್ತು.

–ಬಿ.ವನಜಾಕ್ಷಿ, ಬಿ.ಸಿದ್ದಲಿಂಗಪ್ಪ, ದಾವಣಗೆರೆ

### ಕೊನೆಯ ಸಂಚಿಕೆಗೆ ಕುತೂಹಲ

ಎನ್.ಶೈಲಜಾ ಹಾಸನ ಅವರ 'ಏನು ದಾಹ, ಯಾವ ಮೋಹ' ಪತ್ತೇದಾರಿ ಕಾದಂಬರಿಯ ಶ್ರೀನಿಧಿಯ ಗುಣಗಳು ವಾರದಿಂದ ವಾರಕ್ಕೆ ಅನಾವರಣಗೊಂಡು ಹೊಸ ಪಾತ್ರಗಳ ಸುತ್ತ ಅನುಮಾನ ಮೂಡುತ್ತ ಕುತೂಹಲ ಕಾಯ್ದುಕೊಳ್ಳುವಂತೆ ಮಾಡಿತು. ಕೊನೆಯ ಸಂಚಿಕೆಗಾಗಿ ಕಾಯುತ್ತಿದ್ದೇವೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಬಿ.ಎಸ್.ರಮೇಶ್, ರಮ್ಯಾ ಬೆಳ್ಳಾವೆ, ಮಣಿಪಾಲ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಪೋರನಿಗೂ ಜೇನುಗಡ್ಡ

ನ.1ರ ಸಂಚಿಕೆಯ 'ನಿಮ್ಮ ಪುಟ'ದಲ್ಲಿ 'ಪೋರನಿಗೂ ಜೇನುಗಡ್ಡ' ಓದಿ ಸಂತಸವಾಯಿತು. ಕರಿಮುಡಿಯ ಬಾಣಂತನ, ನೀವು ಕೇಳಿದಿರಿ?, ಫ್ಯಾಷನ್ ಲೇಖನಗಳು ಸಕಾಲಿಕವಾಗಿದ್ದವು. ಚಾರಣ ಯುವಕರನ್ನು ತನ್ನೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಯಿತು. ಎಳೆಯರ ಅಂಗಳ, ಜಾಣರ ಪೆಟ್ಟಿಗೆ, ಸುಖೀಭವ ಅಂಕಣಗಳು ಉತ್ತಮ ವಿಷಯಗಳನ್ನು ಒಳಗೊಂಡಿದ್ದು ಓದಲು ಮುದ ನೀಡಿದವು.

–ರಘುನಂದನ ಉಳ್ಳಿಂಜ, ಗರ್ಡಾಡಿ (ಬೆಳ್ತಂಗಡಿ)

### ಇಷ್ಟು ಭಯಾನಕವೆ?

ನ.1ರ ಸಂಚಿಕೆಯಲ್ಲಿ 'ಕೆಂಜಿಗನೂ ಅವನ ಕರುಳ ಕೆಟ್ಟ ಹಸಿವೂ' ಇಷ್ಟು ಭಯಾನಕವಾಗಿರಬಹುದೆ ಎಂಬಷ್ಟರ ಮಟ್ಟಿಗೆ ಶಾಂತರಾಜ್‌ರ ಕಥೆ ನೈಜವಾಗಿತ್ತು.

–ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

### ಪಡುಕೋಣೆ ಹಾಸ್ಯಲೇಖನ ಸ್ಪರ್ಧೆ

ಪಡುಕೋಣೆ ರಮಾನಂದ ರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಏರ್ಪಡಿಸಿದೆ.

4 ರಿಂದ 6 ಪುಟಗಳೊಳಗಿರುವ ಹಾಸ್ಯ ಲೇಖನವನ್ನು ಡಿ.31ರ ಒಳಗಾಗಿ ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, ಸುಕೇಶವ ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿಟಿಎಂ 1ನೇ ಹಂತ, ಬೆಂಗಳೂರು 560068 – ಇಲ್ಲಿಗೆ ಕಳಿಸಿಕೊಡಬಹುದು. ಆಯ್ದ ಲೇಖನಗಳಿಗೆ ರೂ. 1000, ರೂ.750 ಮತ್ತು ರೂ. 500 ಮೂರು ಬಹುಮಾನಗಳಿವೆ.

॥ ಶ್ರೀ ಸಿದ್ಧಿ ವಿನಾಯಕ ಪ್ರಸನ್ನ॥

**ಕೇರಳದ ಪ್ರಸಿದ್ಧ ಮಾಂತ್ರಿಕ ಜ್ಯೋತಿಷ್ಯರು ಪಂ. ಪೊದುವಾಳ್ ಎಸ್. ಕುಮಾರನ್**



ಕೇರಳದ ಮಲಯಾಳಿ ಶ್ರೀ ಕುಟ್ಟಿಚ್ಚಾತನ್ ಪರಮ ಭಕ್ತರಾದ ಇವರು ನಿಮ್ಮ ಭವಿಷ್ಯವನ್ನು ನಿಖರವಾಗಿ ತಿಳಿಸುತ್ತಾರೆ. ವಾಹನ ಯೋಗ, ಸ್ತ್ರೀ-ಪುರುಷ ವಶೀಕರಣ, ಧನಯೋಗ, ವೈರಿಗಳಿಂದ ರಕ್ಷಣೆ, ಕೋರ್ಟ್, ಕಛೇರಿ, ಭೂಮಿ, ಮನೆ ಕೆಲಸಗಳು, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಮಾನಸಿಕ ಚಿಂತೆ, ಇನ್ನೂ ಅನೇಕ ನಿಮ್ಮ ಗುಪ್ತ ಸಮಸ್ಯೆಗಳಿಗೆ ಶೀಘ್ರ ಪರಿಹಾರವಿದೆ.

ಇಲ್ಲಿಯವರೆಗೂ ತಾವು ಎಷ್ಟೋ ಜ್ಯೋತಿಷ್ಯರಲ್ಲಿ ಹಾಗೂ ದೇವಿ ಭೂತಗಳಲ್ಲಿ ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೇ ಇದ್ದಲ್ಲಿ ಅಂತಹ ಯಾವುದೇ ಕಠಿಣ ಸಮಸ್ಯೆಗಳಿಗೆ ಕೇರಳದ ಮಲಯಾಳಿ ಶ್ರೀ ಕುಟ್ಟಿಚ್ಚಾತನ್ ಮಂತ್ರಶಕ್ತಿಯಿಂದ ಹಾಗೂ ಶಾಸ್ತ್ರೋಕ್ತ ಪದ್ಧತಿಯಿಂದ ಕೇವಲ 11 ದಿನದಲ್ಲಿ ಪರಿಹಾರವಿದೆ

ನಮ್ಮಲ್ಲಿ ಕೇಳುವ ಯಾವುದೇ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು. ದೂರವಾಣಿ ಹಾಗೂ ಪತ್ರದ ಮುಖಾಂತರ ವಿವರಗಳನ್ನು ಪಡೆಯಬಹುದು.

ವಿ.ಸೂ.: ಸತಿ–ಪತಿ ಕಲಹ, ಸವತಿಯಕಾಟ, ಸ್ತ್ರೀ–ಪುರುಷ ವಶೀಕರಣಕ್ಕೆ ಗಂಧರ್ವ ಸಮ್ಮೋಹಿನಿ ಯಂತ್ರ ಮಾಡಿಕೊಡುತ್ತಾರೆ.

ವಿಳಾಸ: ಕೇರಳದ ಜ್ಯೋತಿಷ್ಯರು, ಪಂ ಪೊದುವಾಳ್ ಎಸ್. ಕುಮಾರನ್ ಕರ್ನಾಟಕ ಬ್ಯಾಂಕ್ ಹಿಂಭಾಗ, ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ ಹತ್ತಿರ (ಮನೆ), ಹೊಸಪೇಟೆ, ಬಳ್ಳಾರಿ ಜಿಲ್ಲೆ. ಪಿನ್ ಕೋಡ್- 583201

ಮೊಬೈಲ್ 9880956386

ಪ್ರತಿ ತಿಂಗಳು ದಿನಾಂಕ: 09 ಮತ್ತು 10 ರಂದು ಬೆಂಗಳೂರಿನಲ್ಲಿಯೂ ಸಂಪರ್ಕಿಸಬಹುದು. ಭೇಟಿಗಾಗಿ ಮೊದಲು ಕರೆಮಾಡಿ